ಪ್ರಶ್ನೆ ೭೬೦. ಶ್ರೀ ಬಿ.ಹೆಚ್. ಯಂಕನಾಯಕ್—ಸದಸ್ಯರು ಗೈರು ಹಾಜರು. ಶ್ರೀ ಧರ್ಮ ಸಿಂಗ್–ಸದಸ್ಯರು ಗೈರುಹಾಜರು.

ಸೌಂದತ್ತಿಯಲ್ಲಿ ವಸತಿ ಗೃಹ ನಿರ್ಮಾಣ

೭೫೫. ಶ್ರೀ ಚಂದ್ರಶೇಖರ್ ಮಾಮನಿ (ಪರಸಗಡ).—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಸೌಂದತ್ತಿಯ ಶ್ರೀ ಎಲ್ಲಮ್ಮ ಕ್ಷೇತ್ರದ ಬಳಿ 'ಯಾತ್ರಿಕ' ಎಂಬ ವಸತಿ ಗೃಹವನ್ನು ಕಟ್ಟಲು ಸರ್ಕಾರವು ಯೋಚಿಸಿರುವುದು ನಿಜವೇ.

ಆ) ಹಾಗಿದ್ದಲ್ಲಿ, ಕಟ್ಟಡದ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಬೆಳಗಾವಿ ಜಿಲ್ಲೆಯ ಸವದತ್ತಿಯ ಶ್ರೀ ಎಲ್ಲಮ್ಮ ಕ್ಷೇತ್ರದಲ್ಲಿ ಯಾತ್ರಿಕ ವಸತಿ ಗೃಹವನ್ನು ಕಟ್ಟುವ ವಿಚಾರವು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ಒಪ್ಪಿಗೆ ದೊರೆತ ಕೂಡಲೆ ಭಾರತೀಯ ಯಾತ್ರಿ ಅವಾಸ್ ವಿಕಾಸ್ ಸಮಿತಿಯವರು ಈ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳುವುದು.

ಜೈವಿಕ ಅನಿಲ ಘಟಕಗಳ ವಿಫಲತೆ

೫೭೪. ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಚಕ್ಪೋಸ್ಟ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜೈವಿಕ ಅನಿಲ ಘಟಕಗಳು ಅಧಿಕಾರಿಗಳ ತಪ್ಪು ತಾಂತ್ರಿಕ ಸಲಹೆಯಿಂದ ವಿಫಲವಾಗಿ, ಇವುಗಳನ್ನು ಹೊಂದಿರುವ ರೈತರು ಸಾಲಗಾರರಾಗಿದ್ದು, ಸಾಲ ಮನ್ನಾ ಮಾಡಲು ಅನೇಕ ಸಲ ವಿನಂತಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ, ಸಾಲ ಮನ್ನಾ ಮಾಡಲಾಗುವುದೆ.

ಶ್ರೀ ಅಬ್ದುಲ್ ಜಬ್ಬಾರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಚಕ್ಪೋಸ್ಟ್ ಮಂತ್ರಿಗಳು).—

ಅ) ಬಂದಿದೆ.

ಆ) ಇದಕ್ಕೆ ಅವಕಾಶವಿಲ್ಲ. ಆದರೆ ಸ್ಥಾವರಗಳನ್ನು ದುರಸ್ತಿ ಮಾಡಿಸಿ ಕೊಡಲಾಗುವುದು.

ಶ್ರೀ ಸಿ.ಎಂ. ಉದಾಸಿ.—ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದು ಏನೆಂದರೆ, ಬಯೋಗ್ಯಾಸ್‌ಗಳನ್ನು ತಯಾರು ಮಾಡಬೇಕಾದಾಗ ತಾಂತ್ರಿಕ ಸಲಹೆಯನ್ನು ತಪ್ಪು ಕೊಟ್ಟಿರುವುದರಿಂದ, ಆಗಿರುವ ಹಾನಿಗೆ ಈ ಫಲಾನುಭವಿಗಳೇ ಜವಾಬ್ದಾರಿ ಎಂದು ಮಾಡುವುದಾದರೆ ಕಷ್ಟವಾಗುತ್ತದೆ. ಏಕೆಂದರೆ, ಇದನ್ನು ರಿಪೇರಿ ಮಾಡಿಸಿಕೊಡಲಿಕ್ಕೂ ಸಾಧ್ಯವಿಲ್ಲ ಎನ್ನುವುದು ಅನೇಕ ಸಲ ಕಂಡುಬಂದಿರುವುದರಿಂದ ಆ ಸಾಲವನ್ನು ಮನ್ನಾ ಮಾಡುವುದು ಸೂಕ್ತ ಎಂದು ನಾನು ಭಾವಿಸಿಕೊಂಡಿದ್ದೇನೆ. ಇಲ್ಲದೇ ಹೋದರೆ ಆ ಸಾಲದ ಹೊರೆ ಅವರಿಗೆ ಆಗುತ್ತದೆ. ರಾಜ್ಯದಲ್ಲಿ ಒಟ್ಟು ಒಂದು ಸಾವಿರ ಅಥವಾ ಒಂದು ಸಾವಿರದ ಎರಡುನೂರು ಇರಬಹುದು ಧಾರವಾಡ ಜಿಲ್ಲೆಯಲ್ಲಿ ೨೩೫ ಜನರಿಗೆ ಈ ಸಾಲದ ಹೊರೆಯಾಗಿದೆ. ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ, ರಿಪೇರಿಗೂ ಸಾಧ್ಯವಿಲ್ಲ ಎಂದು ಕಂಡುಬಂದಿರುವುದರಿಂದ ಮಾನ್ಯ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುವುದು ಏನೆಂದರೆ ತಾವು ಹೇಗಾದರೂ ಮಾಡಿ ಈ ಸಾಲವನ್ನು ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ತಪ್ಪುಗೂ ಗೊತ್ತಿರುವಂತೆ ೨ ವಿಧವಾದ ಸ್ಥಾವರಗಳನ್ನು ಮಾಡುತ್ತಿದ್ದರು. ಜಯಲಕ್ಷ್ಮಿ ಎಂಬುವವರು ಅಗ್ರಿಕಲ್ಚರ್‌ಲ್ ಯೂನಿವರ್ಸಿಟಿಯವರು ಮಾಡಿದ ಮಾದರಿಯನ್ನು ಭಾಗತ ಸರ್ಕಾರದವರು ಪರಿಶೀಲಿಸಿ ಅವರ ತಂತ್ರಜ್ಞಾನವನ್ನು ಒಪ್ಪಿರುವುದು. ಇನ್ನೊಂದು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯವರು ಕೊಟ್ಟಿರತಕ್ಕ ಮಾದರಿ. ಅಗ್ರಿಕಲ್ಚರಲ್ ಯೂನಿವರ್ಸಿಟಿಯವರು ಕೊಟ್ಟಿರತಕ್ಕ ಮಾದರಿಯಲ್ಲಿ ೬ ಸಾವಿರ ಸ್ಥಾವರಗಳನ್ನು ಮಾಡಿದ್ದು ಅದರಲ್ಲಿ ೧೯೫೫ ಸ್ಥಾವರಗಳು ಕೆಟ್ಟಿವೆ. ಇದನ್ನು ರಿಪೇರಿ ಮಾಡಿಸುವುದಕ್ಕೆ ಎರಡೂವರೆ ಸಾವಿರ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ಇದರಲ್ಲಿ ಮೈಗುಣ ಎಂಬ ಒಂದು ಸಂಸ್ಥೆ ಮತ್ತು ಇನ್ನೊಂದು ಎಂದರೆ ಅಗ್ರಿಕಲ್ಚರಲ್ ಯೂನಿವರ್ಸಿಟಿಯವರು ಇವರಿಬ್ಬರೂ ಸೇರಿಕೊಂಡು ಸುಮಾರು ೬೦೦ ಚಿಲ್ಲರೆ ಸ್ಥಾವರಗಳನ್ನು ರಿಪೇರಿ ಮಾಡಿದ್ದಾರೆ ಇನ್ನೂ ೧೨೦೦ ಚಿಲ್ಲರೆ ಸ್ಥಾವರಗಳು ರಿಪೇರಿ ಆಗಬೇಕಾಗಿದೆ. ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ, ಈ ರಿಪೇರಿ ಕಾರ್ಯ ನಿಧಾನವಾಗುತ್ತಿದೆ. ಇದಕ್ಕೆ ಕಾರಣ ತಾಂತ್ರಿಕ ಜ್ಞಾನ ಕಡಿಮೆ ಇರತಕ್ಕದು. ಇದಲ್ಲಾ ರಿಪೇರಿ ಆದಮೇಲೂ ಈ ಸ್ಥಾವರಗಳು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಕಂಡುಬಂದಮೇಲೆ ತಾವು ಹೇಳಿರುವ ಸಲಹೆಯನ್ನೂ ಗಣನೆಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ.ಎಂ. ಉದಾಸಿ.—ತಮ್ಮ ಉತ್ತರದಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ.

> "ಅನಿಲ ಯಂತ್ರಗಳನ್ನು ನಿರ್ಮಿಸಲು ಉತ್ತೇಜನವನ್ನು ನೀಡಲಾಗುತ್ತಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಾಗಶಃ ಅನಿಲ ಯಂತ್ರಗಳು ಚೆನ್ನಾಗಿ ಕಾರ್ಯ ನಿರ್ವಹಿಸದೇ ಇರುವುದರಿಂದ ತಾ॥ ೧-೨-೮೭ ರಿಂದ ಈ ಅನಿಲ ಯಂತ್ರಗಳನ್ನು ನಿಲ್ಲಿಸಲಾಗಿದೆ" ಎಂಬುದಾಗಿ ಹೇಳಿದ್ದೀರಿ.

ಆದ್ದರಿಂದ ಇವುಗಳ ರಿಪೇರಿ ಕಾರ್ಯವೇ ಸಾಧ್ಯವಿಲ್ಲವೆಂದು ತಿಳಿದು ಬಂದಿರುವುದರಿಂದ ಇವುಗಳನ್ನು ತೆಗೆದುಕೊಂಡಿರುವವರಿಗೆ ಸಾಲವನ್ನು ಮನ್ನಾ ಮಾಡುವುದು ಸೂಕ್ತ. ನನ್ನ ಕ್ಷೇತ್ರದಲ್ಲಿ ಅಗ್ರಿಕಲ್ಚರಲ್ ಯೂನಿವರ್ಸಿಟಿಯವರು ಬಂದು ರಿಪೇರಿ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಅದು ಪ್ರಯೋಜನ ಆಗಲಿಲ್ಲ. ಧಾರವಾಡದಲ್ಲಿ ಈ ಅನಿಲ ಯಂತ್ರಗಳು ಸಂಪೂರ್ಣವಾಗಿ ಕೆಲಸ ಮಾಡುತ್ತಿಲ್ಲ. ಇದು ತಪ್ಪು ತಾಂತ್ರಿಕ ಜ್ಞಾನವನ್ನು ಕೊಟ್ಟವರಿಂದ ಆಗಿರತಕ್ಕ ದೋಷವೇ ಹೊರತು ಫಲಾನುಭವಿಗಳಿಂದಾಗಿರತಕ್ಕ ದೋಷವಲ್ಲ. ಮಾನ್ಯ ಸಚಿವರು ೧೫ ನೂರು, ೧೬ ನೂರು ಯಂತ್ರಗಳು ಕೆಟ್ಟಿವೆ ಎಂದು ಏನು ಹೇಳಿದ್ದಾರೆ ಅದು ಸರಿಯಲ್ಲ. ಆದ್ದರಿಂದ ಈ ಅನಿಲ ಯಂತ್ರಗಳ ಬಗ್ಗೆ ಸರಿಯಾದ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವುದು ಸೂಕ್ತ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಇದು ಕೇಂದ್ರ ಸರ್ಕಾರದ ರಾಷ್ಟ್ರೀಯ ಕಾರ್ಯಕ್ರಮ ಆದ್ದರಿಂದ ನಾವು ಇದರ ಬಗ್ಗೆ ಸಲಹೆಯನ್ನು ಕಳುಹಿಸಿಕೊಟ್ಟಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡೂ ಸೇರಿ ಈ ಕೆಲಸವನ್ನು ಮಾಡಬೇಕಾಗಿದೆ. ೬ ಸಾವಿರ ಸ್ಥಾವರಗಳ ಪೈಕಿ ೧೯೫೫ ಸ್ಥಾವರಗಳು ಕೆಟ್ಟಿವೆ. ಇದರಲ್ಲಿರತಕ್ಕ ತೊಂದರೆಯನ್ನು ಕೇಂದ್ರಸರ್ಕಾರದವರೂ ಒಪ್ಪಿದ್ದಾರೆ, ಮತ್ತು ಈ ರಿಪೇರಿ ಕಾರ್ಯಕ್ಕಾಗಿ ನಾವೂ ಸ್ವಲ್ಪ ಹಣವನ್ನು ಕೊಡುತ್ತೇವೆ. ನೀವು ಇದನ್ನು ಮಾಡಿಸಿ ಆದರೂ ಅವು ಸರಿಹೋಗದಿದ್ದರೆ ಆಗ ನಿಮ್ಮ ಸಲಹೆಯನ್ನು ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಅದರ ಪ್ರಕಾರ ನಾವು ಈಗಾಗಲೇ ೬೦೦ ಚಿಲ್ಲರೆ ಯಂತ್ರಗಳನ್ನು ರಿಪೇರಿ ಮಾಡಿಸಿದ್ದೇವೆ. ಅವು ಚೆನ್ನಾಗಿ ಕೆಲಸ ಮಾಡುತ್ತಿವೆ. ಇನ್ನೂ ಒಂದು ಸಾವಿರದ ಇನ್ನೂರು ಚಿಲ್ಲರೆ ಯಂತ್ರಗಳು ರಿಪೇರಿ ಆಗಬೇಕಾಗಿದೆ. ಅವುಗಳನ್ನು ರಿಪೇರಿ ಮಾಡಿಸಿದ ಮೇಲೂ ಅವು ಕೆಲಸ ಮಾಡದಿದ್ದರೆ ಆಗ ನಿಮ್ಮ ಸಲಹೆಯನ್ನು ನಾವು ತೆಗೆದುಕೊಳ್ಳುತ್ತೇವೆ. ಈ ಕೆಲಸವನ್ನು ನಾವು ಒಬ್ಬರೇ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇದು ಕೇಂದ್ರ ಸರ್ಕಾರದ ಯೋಜನೆ ಎಂದು ನಾನು ಈಗಾಗಲೇ ಹೇಳಿದ್ದೇವೆ. ಕೇಂದ್ರ ಸರ್ಕಾರದವರ ಸಲಹೆಯ ಪ್ರಕಾರ ನಾವು ಇದನ್ನು ಮಾಡುತ್ತಿದ್ದೇವೆ. ನಾವು ಸ್ವಲ್ಪ ಹಣವನ್ನು ಕೊಡುತ್ತೇವೆ. ನೀವು ರಿಪೇರಿ ಮಾಡಿಸಿ ಎಂದು ಹೇಳಿದ್ದಾರೆ.

ಶ್ರೀ ಸಿ. ಎಂ. ಉದಾಸಿ.—ಆಗಲಿ, ಈಗ ಸಾಲ ವಸೂಲಾತಿಯನ್ನಾದರೂ ತಡೆಹಿಡಿಯುವಂತೆ ತಾವು ಬ್ಯಾಂಕ್ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕು. ಏಕೆಂದರೆ ಫಲಾನುಭವಿಗಳು ಸಕಾಲದಲ್ಲಿ

ಸಾಲವನ್ನು ಕೊಡದಿದ್ದರೆ ಅವರಮೇಲೆ ಬ್ಯಾಂಕ್‌ನವರು ಕ್ರಮ ತೆಗೆದುಕೊಳ್ಳುತ್ತಾರೆ. ಅವರು ಕ್ರಮ ತೆಗೆದುಕೊಂಡು ಸಾಲ ವಸೂಲ್ಮಾಡುವುದಕ್ಕೆ ಮಾಡತಕ್ಕ ವ್ಯವಹಾರದ ಖರ್ಚನ್ನೂ ಕೂಡ ಈ ಫಲಾನುಭವಿಗಳ ಮೇಲೆ ಹಾಕುತ್ತಾರೆ. ನಾನು ಈ ಹಿಂದೆಯೂ ಕೂಡ ಇದೇ ಸದಸದಲ್ಲಿ ಇದೇ ಪ್ರಶ್ನೆಯನ್ನು ಕೇಳಿದ್ದೆ. ಆಗಲೂ ಕೂಡ ಅಂತಿಮವಾಗಿ ಇದು ತೀರ್ಮಾನ ಆಗಲಿಲ್ಲ. ಆದ್ದರಿಂದ ಸಧ್ಯದ ಮಟ್ಟಿಗಾದರೂ ಸಾಲ ವಸೂಲಾತಿ ಕ್ರಮವನ್ನು ತಡಹಿಡಿಯುವುದಕ್ಕೆ ಬ್ಯಾಂಕಿನ ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತೀರಾ ?

ಇನ್ನೊಂದು ವಿಚಾರ ಎಂದರೆ, ಇನ್ನು ೩ ತಿಂಗಳಲ್ಲಿ ಇದರ ಬಗ್ಗೆ ಸರ್ಕಾರ ಒಂದು ಅಂತಿಮ ತೀರ್ಮಾನವನ್ನು ಕೈಗೊಳ್ಳುತ್ತದೆಯೇ ?

ಶ್ರೀ ಅಬ್ದುಲ್ ನಜೀರ್‌ಸಾಬ್.— ಆಗಲಿ ಸಾಲವನ್ನು ವಸೂಲ್ಮಾಡಕೂಡದೆಂದು ಬ್ಯಾಂಕ್‌ನ ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ಸ್ವಾಮಿ, ಬಯೋಗ್ಯಾಸ್‌ನ ತಂತ್ರಜ್ಞಾನವೇ ಸರಿಯಾಗಿಲ್ಲ ಅಂದಮೇಲೆ ರಿಪೇರಿ ಮಾಡಿಸತಕ್ಕ ಪ್ರಶ್ನೆಯೇ ಬರುವುದಿಲ್ಲ. ನಮ್ಮ ಇಡೀ ಕೋಲಾರ ಜಿಲ್ಲೆಯಲ್ಲಿ ಒಂದೂ ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಒಂದೊಂದು ಯಂತ್ರಕ್ಕೆ ಎರಡೆರಡು ಸಾವಿರದಂತೆ ಕೊಟ್ಟರೆ ನಮ್ಮ ಖಜಾನೆಗೆ ನಷ್ಟವಾಗುತ್ತದೆ. ಈ ಬಯೋಗ್ಯಾಸ್‌ನ ನಿರ್ಮಾಣದ ತಾಂತ್ರಿಕಜ್ಞಾನ ಸರಿಯಾಗಿಲ್ಲ. ಆದ್ದರಿಂದ ಇದರಲ್ಲಿ ರಿಪೇರಿಯ ಪ್ರಶ್ನೆಯೇ ಬರುವುದಿಲ್ಲ, ನನ್ನ ಒಂದು ಸಲಹೆ ಎಂದರೆ ಈ ಯಂತ್ರವನ್ನು ಗೋಬರ್ ಗ್ಯಾಸ್ ಪ್ಲಾಂಟ್ ಆಗಿ ಪರಿವರ್ತನೆ ಮಾಡಿ ಅದಕ್ಕೆ ಒಂದೂ ಡ್ರಂ ಕೊಡುವುದಕ್ಕೆ ಸಾಧ್ಯವಾದರೆ ಕೊಡಬಹುದು. ನಿಮಗೆ ತಾಂತ್ರಿಕ ಜ್ಞಾನದ ಮಾಹಿತಿಯನ್ನು ಕೊಟ್ಟಿರುವವರು ಸರಿಯಾಗಿ ಕೊಟ್ಟಿಲ್ಲ. ಆದ್ದರಿಂದ ಇದನ್ನು ಗೋಬರ್ ಗ್ಯಾಸ್ ಪ್ಲಾಂಟ್ ಆಗಿ ಪರಿವರ್ತನೆ ಮಾಡಿನೋಡಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಇದರಲ್ಲಿ ತಾಂತ್ರಿಕ ಜ್ಞಾನದ ದೋಷ ಇದೆಯೆಂದು ನಾನು ಭಾವಿಸುವುದಿಲ್ಲ. ಏಕೆಂದರೆ ೬ ಸಾವಿರ ಸ್ಥಾವರಗಳನ್ನು ತಯಾರಿಸಿದ್ದು ಅದರಲ್ಲಿ ೧೯೮೫ ಕೆಟ್ಟಿವೆ. ಇವುಗಳಲ್ಲಿಯೂ ಕೂಡ ಸುಮಾರು ೬ ನೂರಂ ಚಿಲ್ಲರೆ ರಿಪೇರಿ ಮಾಡಲಾಗಿದೆ. ಅವೆಲ್ಲವೂ ಚೆನ್ನಾಗಿ ಕೆಲಸ ಮಾಡುತ್ತಿವೆ. ಸುಮಾರು ೪ ಸಾವಿರ ಚಿಲ್ಲರೆ ಸ್ಥಾವರಗಳು ಚೆನ್ನಾಗಿ ಕೆಲಸಮಾಡುತ್ತಿರುವುದರಿಂದ ಇದರಲ್ಲಿ ತಾಂತ್ರಿಕ ಜ್ಞಾನದ ದೋಷವಿರಲಾರದು. ರಿಪೇರಿ ಕೆಲಸ ಮಾಡುವವರಿಗೆ ತಾಂತ್ರಿಕ ಜ್ಞಾನದ ಕೊರತೆ ಇದೆಯೆಂದಂ ಹೇಳಬಹುದು. ಮಾನ್ಯ ಸದಸ್ಯರು ಹೇಳಿದಂತೆ ಇದನ್ನು ಗೋಬರ್ ಗ್ಯಾಸ್ ಪ್ಲಾಂಟ್ ಆಗಿ ಪರಿವರ್ತನೆ ಮಾಡಿ ಡ್ರಂ ಟೈಪ್ ಮಾಡುವುದಾದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ.—ನಮ್ಮ ಕೋಲಾರ ಜಿಲ್ಲೆಯಲ್ಲಿ ಕೊಟ್ಟಿರತಕ್ಕ ಬಯೋಗ್ಯಾಸ್ ಒಂದು ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಕೆಲಸ ಮಾಡುತ್ತಿಲ್ಲವೆಂದರೆ ಅದು ಯಾವುದಂ ಏನು ಎನ್ನುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಬೈಲಹೊಂಗಲ ಪಟ್ಟಣದಲ್ಲಿ ಹೆಚ್ಚಿನ ನೀರಿನ ಶೇಖರಣೆಗಾಗಿ ಜಲಸಂಗ್ರಹಾಗಾರವನ್ನು ನಿರ್ಮಿಸುವುದು

೭೧೭. ಶ್ರೀ ಎಸ್. ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೈಲಹೊಂಗಲ ಪಟ್ಟಣದಲ್ಲಿ ಹೆಚ್ಚಿನ ನೀರಿನ ಶೇಖರಣೆಗಾಗಿ ನೆಲಮಟ್ಟದ, ಮೇಲ್ಮಟ್ಟದ ಜಲಸಂಗ್ರಹಾಗಾರ ನಿರ್ಮಿಸುವ ಮತ್ತು ವಿತರಣಾ ವ್ಯವಸ್ಥೆಯನ್ನು ಪುನರ್ ರೂಪಿಸುವ ಅವಶ್ಯಕತೆ ಇದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಸರ್ಕಾರದ ಪತ್ರ ಕ್ರಮಾಂಕ ಹೆಚ್‌ಯಂ ೬ ಯಂಡಬ್ಲ್ಯೂಎಸ್ ೮೭ರ ದಿನಾಂಕ ೧೬-೩-೧೯೮೭ರ ಆದೇಶದಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು